ಹೆಣ್ಣು ಹಕ್ಕಿಯ ಕಣ್ಣಿನ ಸುತ್ತ ಬಿಳಿಯ ಅಗಲದ ದುಂಡನೆಯ ಪಟ್ಟೆ ಇರುತ್ತದೆ. ಸಂಸಾರ ಆರಂಭಕ್ಕೆ ಮುನ್ನ ಮನೆಯ ತಲಾಶು ನಡೆಯಬೇಕು. ಎರಡೂ ಸೇರಿ ಗೂಡು ಕಟ್ಟಲು ಸೂಕ್ತವಾದ ಒಂದು ಎತ್ತರದ ಮರವನ್ನು ಆಯ್ದುಕೊಳ್ಳುತ್ತವೆ. ಆ ಮರದಲ್ಲಿ ಒಂದು ಪೊಟರೆ ಇರಲೇಬೇಕು. ಗಂಡು–ಹೆಣ್ಣುಗಳೆರಡೂ ಆ ಪೊಟರೆಯ ಒಳಗೆ ಹೋಗಿ ಇಲ್ಲಿ ತಮ್ಮ ಬದುಕು ಶುರು ಮಾಡಬಹುದೇ? ಎಂಬ ಸೂಕ್ಷ್ಮ ತನಿಖೆಯನ್ನೂ ಮಾಡುತ್ತವೆ. ಇಬ್ಬರಿಗೂ ಒಪ್ಪಿಗೆಯಾದರೆ ಮುಂದಿನ ಹಂತ ಸಮ್ಮಿಲನ ಕ್ರಿಯೆ.

ಗಂಡಿನ ಜೊತೆಯ ಸರಸ ಸಲ್ಲಾಪ ಮುಗಿಸುವ ಹೆಣ್ಣು ಫಲವತಿಯಾಗುವ ಸುಳಿವು ಸಿಕ್ಕಾಗ ಒಂದು ದಿನ ಪೊಟರೆಯೊಳಗೆ ಪ್ರವೇಶಿಸುತ್ತಾಳೆ. ಹೆಣ್ಣು ಹಕ್ಕಿಯ ಮೈಯ ಸುತ್ತಳತೆಗೆ ಹೋಲಿಸಿದರೆ ಪೊಟರೆಯ ಕಿಂಡಿಯ ಜಾಗೆ ಬಹಳ ಚಿಕ್ಕದಾಗಿರುತ್ತದೆ. ಅದರೊಳಗೆ ದೇಹವನ್ನು ತೂರಿಸಿಕೊಂಡು ಹೋಗುವುದು ಬಲು ಸವಾಲಿನ ಕೆಲಸ. ಯಮ ಸಾಹಸಪಟ್ಟು ಕೊಸರಾಡಿ, ಹೆಣಗಾಡಿ ಅಂತೂ ಹೆಣ್ಣು ಹಕ್ಕಿ, ಕತ್ತಲ ಗೂಡೊಳಗೆ ದಾಖಲಾಗುತ್ತದೆ. ಇದನ್ನೆಲ್ಲಾ ಪಕ್ಕವೇ ನಿಂತು ಗಂಡು ಹಕ್ಕಿ ಗಮನಿಸುತ್ತದೆ. ಮುಂದೆ ಗಂಡು ಖಗ ಮಣ್ಣಿನ ಹೆಂಟೆಗಳನ್ನು ಆಯ್ದು ತರಲು ಹೋಗುತ್ತದೆ. ಅಷ್ಟರೊಳಗೆ ಪೊಟರೆಯ ಒಳಗಿನ ಭಾಗವನ್ನು ಹೆಣ್ಣು ಸ್ವಚ್ಛಗೊಳಿಸಿ ಅಣಿಯಾಗುತ್ತದೆ. ಗೂಡಿನ ಒಳಗಿರುವ ಕಸಕಡ್ಡಿ, ಒಣಗಿದ ಮರದ ತೊಗಟೆಗಳನ್ನು ನೀಟಾಗಿ ಕಿತ್ತು ಮೊದಲೇ ಹೊರಗೆ ಬಿಸಾಕುತ್ತದೆ.



ನಂತರ ಗಂಡು ಒಂದೊಂದಾಗಿ ತಂದು ಕೊಡುವ ಮಣ್ಣಿನ ಹೆಂಟೆಗಳನ್ನು ಸ್ವೀಕರಿಸುವ ಹೆಣ್ಣು ಅದಕ್ಕೆ ತನ್ನ ಅಂಟು ಜೊಲ್ಲನ್ನು ಸೇರಿಸಿ ಹದವಾಗಿ ಕಲೆಸುತ್ತದೆ. ನಂತರ ಗೂಡಿನ ಅಗಲ ಬಾಯನ್ನು ಹಂತಹಂತವಾಗಿ ಮುಚ್ಚತೊಡಗುತ್ತದೆ. ಗಾರೆಯ ಕೆಲಸದವರ ರೀತಿ ಪೊಟರೆಯ ಕಿಂಡಿಯನ್ನು ಕೊಕ್ಕಿನಿಂದ ಮುಚ್ಚುತ್ತಾ ಗಟ್ಟಿಯಾಗಿ ಕುಟ್ಟುತ್ತದೆ. ತನ್ನ ಕೊಕ್ಕನ್ನು ಕರನೆಯ ರೀತಿ ಬಳಸುವ ಹೆಣ್ಣು ಗಿಲಾವು ಮಾಡುವಷ್ಟೇ ಸೂಕ್ಷ್ಮವಾಗಿ ಕೆಲಸ ನಿರ್ವಹಿಸುವಲ್ಲಿ ನಿಪುಣೆ. ಅಲ್ಲಿ ತನ್ನ ಕೊಕ್ಕು ಹೊರ ಚಾಚುವಷ್ಟು ಸಣ್ಣ ಜಾಗವನ್ನು ಮಾತ್ರ ಆಕೆ ಉಳಿಸಿಕೊಳ್ಳುತ್ತಾಳೆ. ಮುಂದೆ ಗಂಡು ತಂದು ಕೊಡುವ ಆಹಾರ ಸ್ವೀಕರಿಸಲು ಆ ಕಿರು ಕಿಂಡಿ ಬೇಕು. ಈ ಪೊಟರೆಯೊಳಗೆ ಯಾವ ಶತ್ರುಗಳು ಬಾರದಂತೆ ನಡೆಸಲಾದ ತಯಾರಿ ಯಶಸ್ವಿಯಾಗಿದೆ. ಅಂದಹಾಗೆ ಇದರ ತಂಟೆಗೆ ಹಾವಾಗಲಿ, ಇತರೆ ಸಣ್ಣಪ್ರಾಣಿ, ಪಕ್ಷಿಗಳಾಗಲಿ, ಸರೀಸೃಪಗಳಾಗಲಿ ಹೆದರಿ ಹತ್ತಿರವೂ ಬರುವುದೇ ಇಲ್ಲ. ಬಂದರೆ ಅವುಗಳ ಗ್ರಹಚಾರ ಕೆಟ್ಟಿದೆ ಎಂದರ್ಥ. ತೀವ್ರವಾದ ದಾಳಿ ನಡೆಸುವ ಗಂಡು ಮಂಗಟ್ಟೆ ಗೂಡಿನ ಹತ್ತಿರ ಬಂದವನ್ನು ಕುಕ್ಕಿ ಸಾಯಿಸುವುದು ಮಾತ್ರವಲ್ಲ ಅವನ್ನೇ ತಮ್ಮ ಆಹಾರ ಸಾಮಾಗ್ರಿ ಮಾಡಿಕೊಂಡು ಮಜಾ ಉಡಾಯಿಸಿ ಬಿಡುತ್ತವೆ. ಇದರ ಭಾರವಾದ ಕಳಶದ ರೀತಿಯ ಕೊಕ್ಕಿಗೆ ಅಘಾತಕಾರಿ ಹೊಡೆತಗಳ ಕೊಡುವ ಶಕ್ತಿಯಿದೆ. ದೊಡ್ಡ ಮರದ ಒಣಗಿದ ರೆಂಬೆ ಕೊಂಬೆಗಳನ್ನು ಕೊಡಲಿಯಲ್ಲಿ ಬೀಸಿ ಹೊಡೆದಂತೆ ಮಾಡಿ ಕುಕ್ಕಿ ಕೆಡಹುತ್ತದೆ.

ಗೂಡಿನೊಳಗೆ ಸೇರಿ ಮೊಟ್ಟೆ ಇಡಲು ಅಣಿಯಾದ ಹೆಣ್ಣು ಹಕ್ಕಿಯ ಮುಂದೆ ಈಗ ತೊಂಬತ್ತು ದಿನಗಳ ಸುದೀರ್ಘ ಹೋರಾಟದ ಸಮಯವಿದೆ. ಅಷ್ಟೂ ದಿನಗಳೂ ಅದು ಈ ಕತ್ತಲ ಕೋಣೆಯೊಳಗೇ ಕಾಲ ತಳ್ಳಬೇಕು. ಮುಂದೆ ತಾನಿಡಬಲ್ಲ ಮೊಟ್ಟೆಗಳಿಗೆ ಹಾಗೂ ನಂತರ ಮೂಡುವ ಮಕ್ಕಳೀಗೀಗ ಮೆತ್ತನೆ